**ಸಿ.ಸಿ. 1620/2021**

ಪಿ.ಡಬ್ಲ್ಯೂ-1

ದಿನಾಕಃ 15.06.2024 ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಮ್.ಕೆ.ಎಸ್ ವಕೀಲರಿಂದಃ**

2021 6 ನೇ ತಿಂಗಳಿನಲ್ಲಿ ಆರೋಪಿ ನನ್ನ ಬಳಿ ಹಣ ಕೇಳಿರುತ್ತಾನೆಂದು ನಾನು ಹೇಳಿದ್ದು, ಸದರಿ 6 ನೇ ತಿಂಗಳಿನಲ್ಲಿ ಯಾವ ದಿನಾಂಕದಂದು ಹಣವನ್ನು ನೀಡಿರುತ್ತೀರಿ ಎಂದರೆ ಸಾಕ್ಷಿ ದಿನಾಂಕ ನೆನಪಿರುವುದಿಲ್ಲ ಎಂದು ಉತ್ತರಿಸಿರುತ್ತಾರೆ. ದಿನಾಂಕ ನೆನಪಿರುವುದಿಲ್ಲ ಎಂದರೆ 6 ನೇ ತಿಂಗಳು ಅಥವಾ 7 ನೇ ತಿಂಗಳಿನಲ್ಲಿ ಹಣ ನೀಡಿರುತ್ತೀರಾ ಎಂದರೆ ಸಾಕ್ಷಿ 6 ನೇ ತಿಂಗಳಿನಲ್ಲಿಯೇ ಹಣ ನೀಡಿರುತ್ತೇನೆಂದು ಉತ್ತರಿಸಿರುತ್ತಾರೆ. ಈ ಹಣಕಾಸಿನ ವ್ಯವಹಾರದಲ್ಲಿ ಬಡ್ಡಿ ಬಗ್ಗೆ ಯಾವುದೇ ವ್ಯವಹಾರ ಆಗಿರುವುದಿಲ್ಲ. ಆರೋಪಿ ನನ್ನ ಬಳಿ ಹಣ ಪಡೆದು 2 ತಿಂಗಳ ನಂತರ ಚೆಕ್ ನ್ನು ನೀಡಿರುತ್ತಾರೆ. ಹಣ ಪಡೆದು 2 ತಿಂಗಳ ನಂತರ ಹಣವನ್ನು ಹಿಂದುರುಗಿಸುತ್ತೇನೆಂದು ಆರೋಪಿ ಹೇಳಿರುತ್ತಾರೆ. ನನ್ನ ನೋಟೀಸ್ ಮತ್ತು ದೂರಿನಲ್ಲಿ ಹಾಗೂ ಮುಖ್ಯ ವಿಚಾರಣೆಯಲ್ಲಾಗಲಿ ಸದರಿ ಬಗ್ಗೆ ಹೇಳಿ ಬರೆಸಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿ ನನ್ನ ಬಳಿ 6 ನೇ ತಿಂಗಳಿನಲ್ಲಿ ಹಣ ಕೇಳಿದ್ದು ಒಂದು ವಾರದ ನಂತರ ನಾನು ಆರೋಪಿ ಹಣ ನೀಡಿರುತ್ತೇನೆಂದು ಹೇಳಿದ್ದು. ಸದರಿ ವಿಚಾರ ಸುಳ್ಳು ಅಂತಹ ವ್ಯವಹಾರ ನನ್ನ ಹಾಗೂ ಆರೋಪಿ ನಡುವೆ ನಡೆದಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿ ಯಾವ ವರ್ಷದಲ್ಲಿ ಎಲ್ಲಿ ನಡೆಯಿತು, ಯಾರೊಂದಿಗೆ ಮದುವೆಯಾಗಿರುತ್ತಾರೆಂದು ನನಗೆ ಗೊತ್ತಿಲ್ಲ. ಆರೋಪಿಯ ಮದುವೆ ಪ್ರೇಮ ವಿವಾಹನಾ ಅಥವಾ ಹಿರಿಯರು ಒಪ್ಪಿ ಮಾಡಿರುತ್ತಾರೋ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆರೋಪಿಯ ಮದುವೆ ಯಾವುದೇ ಛತ್ರದಲ್ಲಿ ವಿಜ್ರುಬೃಣೆಯಿಂದ ಆಗಿರುವುದಿಲ್ಲ ಹಾಗೂ ಮದುವೆಗೆ ಯಾವುದೇ ಖರ್ಚು ಆಗಿರುವುದಿಲ್ಲ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು ಆರೋಪಿಗೆ ಮದುವೆಯ ಖರ್ಚಿಗಾಗಿ ಹಣ ನೀಡಿದ್ದೇನೆಂದು ನಾನು ಹೇಳಿದ್ದು 4-5 ವರ್ಷದ ಹಿಂದೆಯೇ ಆರೋಪಿಯ ಪ್ರೇಮ ವಿವಾಹ ಆಗಿರುತ್ತೆಂದರೆ ನನಗೆ ಗೊತ್ತಿಲ್ಲ. ಆರೋಪಿ ಸರಳವಾಗಿ ಸಬ್ ರಿಜಿಸ್ಟ್ರಾರ್ ಕಛೇರಿಯಲ್ಲಿ ವಿವಾಹ ಆಗಿದ್ದರು ಎಂದರೆ ನನಗೆ ಗೊತ್ತಿಲ್ಲ. ಆರೋಪಿ ಮದುವೆ ಖರ್ಚಿಗಾಗಿ ನನ್ನ ಬಳಿ ಹಣ ಪಡೆದಿರುವುದು ಸುಳ್ಳು ಎಂದರೆ ಸರಿಯಲ್ಲ. ಆರೋಪಿ ಹಿಂದೆ ಮಾಡಿರುವ

ಸಾಲವನ್ನು ಮರುಪಾವತಿ ಮಾಡಲು ನನ್ನ ಬಳಿ ಹಣ ಪಡೆದಿರುವ ವಿಚಾರ ಸುಳ್ಳು ಎಂದರೆ ಸರಿಯಲ್ಲ.

ಆರೋಪಿಗೆ ಹಣವನ್ನು ಆರೋಪಿಯ ಮನೆಯಲ್ಲಿಯೇ ನೀಡಿರುತ್ತೇನೆ. ಸದರಿ ವಿಚಾರವನ್ನು ಖುದ್ದು ನೋಡಿರುವವರು ಯಾರೂ ಇರುವುದಿಲ್ಲ. ನಾನು ಹಣ ನೀಡಲು ಹೋದಾಗ ಆರೋಪಿಯನ್ನು ಹೊರತುಪಡಿಸಿ ಮನೆಯಲ್ಲಿ ಯಾರೂ ಇರಲಿಲ್ಲ. ಆರೋಪಿ ಎರಡು ಲಕ್ಷ ಕೇಳಿರುತ್ತಾರೆ. ಎರಡು ಲಕ್ಷ ರೂ.ಗಳನ್ನು ಒಂದೇ ಬಾರಿಗೆ ನೀಡಿರುತ್ತೇನೆ. ಸದರಿ ಹಣವನ್ನು ನಾನು ನನ್ನ ಮನೆಯಲ್ಲಿ ಭತ್ತದ ದುಡ್ಡು ಬಂದಿರುವುದನ್ನು ಇಟ್ಟಿರುತ್ತೇನೆ. ನನ್ನ ಬಳಿ 6 ನೇ ತಿಂಗಳು 2021 ರಲ್ಲಿ ಎರಡು ಲಕ್ಷ ಇರುವ ಬಗ್ಗೆ ನ್ಯಾಯಾಲಯದ ಮುಂದೆ ಯಾವುದೇ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ ಮುಂದುವರೆದು ಭತ್ತದ ದುಡ್ಡಿಗೆ ಯಾರೂ ದಾಖಲೆ ನೀಡುವುದಿಲ್ಲ ಎಂದು ನುಡಿಯುತ್ತಾರೆ. ಯಾವ ಮೂಲದಿಂದ ನನಗೆ ಆದಾಯಗಳು ಬರುತ್ತವೆಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ಭತ್ತದಿಂದ ಹಣ ಬಂದಿರುವುದು ಸುಳ್ಳು ನನಗೆ ಯಾವುದೇ ಆದಾಯ ಇಲ್ಲ ಎಂದರೆ ಸರಿಯಲ್ಲ. ನನಗೆ ಜಮೀನು ಇರುತ್ತದೆಂದು ನುಡಿಯುತ್ತಾರೆ. ಸದರಿ ಬಗ್ಗೆ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ಆರೋಪಿ ಆರ್ಥಿಕವಾಗಿ ಸಬಲರಾಗಿದ್ದು ನನ್ನ ಬಳಿ ಸಾಲ ಮಾಡಲು ಅವರಿಗೆ ಅವಶ್ಯಕತೆ ಇಲ್ಲ ಎಂದರೆ ಸರಿಯಲ್ಲ. ಆರೋಪಿ ಯಾವ ದಿನಾಂಕವನ್ನು ನಮೂದಿಸಿ ಚೆಕ್ಕನ್ನು ನೀಡಿರುತ್ತಾರೆಂದರೆ ಸಾಕ್ಷಿ 8 ನೇ ತಿಂಗಳು 2021 ರಲ್ಲಿ ಮೊದಲನೇ ವಾರದಲ್ಲಿ ಕೇಳಲು ಹೋಗಿರುತ್ತೇನೆ ಆ ದಿನದ ಎರಡು ನಂತರ ಚೆಕ್ ನ್ನು ನೀಡಿರುತ್ತಾರೆ.

ನಾನು ಆದಾಯ ತೆರಿಗೆ ಪಾವತಿದಾರನಲ್ಲ. ಹಾಲಿ ನಾನು ಬಿಳಿಕೆರೆಯಲ್ಲಿ ಬಾಡಿಗೆ ಮನೆಯಲ್ಲಿ ವಾಸವಿರುತ್ತೇನೆ. ನನಗೆ ಒಬ್ಬನೇ ಮಗ ಅವನ ಖರ್ಚನ್ನು ನಾನೆ ಭರಿಸುತ್ತಿದ್ದೇನೆ. ನನಗೆ ಸರ್ಕಾರದಿಂದ ಬಿ.ಪಿ.ಎಲ್ ಕಾರ್ಡನ್ನು ನೀಡಿರುತ್ತಾರೆ. ಸದರಿ ಕಾರ್ಡ ಬಡವರಿಗೆ ಮಾತ್ರ ಕೊಡುವಂತದ್ದು ಎಂದರೆ ಸರಿ. ಆರೋಪಿ ನೀಡಿರುವ ಚೆಕ್ ನಂಬರ 260628. ಸದರಿ ಚೆಕ್ YES ಬ್ಯಾಂಕನ ಆರೋಪಿಯ ಖಾತೆಗೆ ಸೇರಿದ್ದು. ಸದರಿ ಚೆಕ್ ನ್ನು ಬಿಳಿಕೆರೆ ಎಂ.ಬಿ.ಸಿ.ಸಿ ಬ್ಯಾಂಕ್ ಗೆ ದಿಃ21.08.2021 ರಲ್ಲಿ ನಗದೀಕರಣಕ್ಕೆ ಸಲ್ಲಿಸಿರುತ್ತೇನೆ. ಖಾತೆ ನಿಶ್ಕ್ರಿಯೆವಾಗಿದೆ ಎಂದು ಹಿಂಬರವನ್ನು ನೀಡಿರುತ್ತಾರೆ. ಸದರಿ ವಿಚಾರವಾಗಿ ಆರೋಪಿಯ ಬಳಿ ಕೇಳಿರುತ್ತೇನೆ

ಆಗ ಉಡಾಫೆ ಮಾತನಾಡಿದ್ದು ನಂತರ ವಕೀಲರ ಮೂಲಕ ನೋಟೀಸ್ ಜಾರಿಗೊಳಿಸಿರುತ್ತೇನೆ. ಹಿಂಬರವನ್ನು ಪಡೆದ ನಂತರ ಆರೋಪಿಯನ್ನು ಭೇಟಿ ಮಾಡಿಲ್ಲ ನೋಟೀಸ್ ಜಾರಿಗೊಳಿಸಿರುವುದಿಲ್ಲ ಎಂದರೆ ಸುಳ್ಳು. ದಿಃ13.09.2021 ರಲ್ಲಿ ಆರೋಪಿಗೆ ನೋಟೀಸ್ ನ್ನು ವಕೀಲರ ಮೂಲಕ ನೀಡಿರುತ್ತೇನೆ. ಆರೋಪಿಗೆ ನೋಟೀಸ್ ಜಾರಿಯಾಗಿದ್ದರೆ ಆರೋಪಿ ಪ್ರತ್ಯೂತ್ತರ ನೀಡುತ್ತಿದ್ದರು ಎಂದರೆ ನೋಟೀಸ್ ಜಾರಿಯಾಗಿರುತ್ತದೆ ನನಗೆ ಯಾವುದೇ ಪ್ರತ್ತ್ಯೂತ್ತರ ಬಂದಿರುವುದಿಲ್ಲ. ನೋಟೀಸ್ ಜಾರಿಯಾಗಿರುವ ಬಗ್ಗೆ ವಕೀಲರ ಮೂಲಕ ತಿಳಿದುಕೊಂಡಿರುತ್ತೇನೆ. 6 ನೇ ತಿಂಗಳ 2021 ರಲ್ಲಿ ಕೋವಿಡ್ ಸಾಂಕ್ರಾಮಿಕ ರೋಗ ಹರಡುತ್ತಿತ್ತು ಸಂಪೂರ್ಣವಾಗಿ ಲಾಕ್ ಡೌನ್ ಇತ್ತು ಎಂದರೆ ಸರಿ. ಸದರಿ ಸಮಯದಲ್ಲಿ ಜನಗಳು ಜೀವನ ಮಾಡಲು ಕಷ್ಟ ಇದ್ದು ಎರಡು ಲಕ್ಷ ಇಲ್ಲದಿದ್ದರೂ ಇದೆ ಎಂದು ಸುಳ್ಳು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಆರೋಪಿ ಕನ್ನಡದಲ್ಲಿ ಅಥವಾ ಆಂಗ್ಲ ಭಾಷೆಯಲ್ಲಿ ಸಹಿ ಮಾಡಿತ್ತಾರೋ ಎಂಬುದರ ಬಗ್ಗೆ ನಾನು ತಿಳಿದುಕೊಂಡಿರುವುದಿಲ್ಲ. ಸಾಕ್ಷಿಗೆ ನಿಪಿ-5 ನ್ನು ತೋರಿಸಲಾಗಿ ಸದರಿ ನಿಪಿ-5 ರಲ್ಲಿರುವ (ಸ್ವೀಕರಿಸುವವರು ಸಹಿ ಮತ್ತು ಹೆಸರು) ಅದರ ಮೇಲಿರುವ ಸಹಿ ಯಾರದ್ದು ಎಂಬುವ ಪ್ರಶ್ನೆಗೆ ಸಾಕ್ಷಿ ಹರೀಷ ಆರೋಪಿಯದು ಎಂದು ನುಡಿದಿರುತ್ತಾರೆ. ಸಾಕ್ಷಿ ನಿಪಿ-1 ಚೆಕ್ ನ್ನು ತೋರಿಸಲಾಗಿ ಸದರಿ ನಿಪಿ-1 ರಲ್ಲಿರುವ ಸಹಿ ಯಾರದ್ದು ಎಂಬುವ ಪ್ರಶ್ನೆಗೆ ಸಾಕ್ಷಿ ನಾನು ಆರೋಪಿಯನ್ನು ಭೇಟಿಯಾಗಲು ಹೋಗುವಷ್ಟರಲ್ಲಿ ಆರೋಪಿಯೇ ಚೆಕ್ ನ್ನು ಬರೆದು ಇಟ್ಟಿರುತ್ತಾರೆ ಎಂದು ನುಡಿದಿರುತ್ತಾರೆ. ನನ್ನ ಸಮಕ್ಷಮ ನಿಪಿ-1 ಚೆಕ್ ನ್ನು ಬರವಣಿಗೆ ಮಾಡುವುದಾಗಲಿ ಸಹಿ ಮಾಡವುದಾಗಲಿ ಮಾಡಿರುವುದಿಲ್ಲ ಎಂದರೆ ಸರಿ. ನಿಪಿ-5 ರಲ್ಲಿರುವ ನಿಪಿ-1 ರಲ್ಲಿರುವ ಆರೋಪಿಯ ಸಹಿಯಲ್ಲಿ ವ್ಯತ್ಯಾಸ ಇರುತ್ತದೆಂದರೆ ನನಗೆ ಗೊತ್ತಿಲ್ಲ. ನಿಪಿ-5 ರಲ್ಲಿರುವ ಸಹಿ ಆರೋಪಿಯದ್ದೇ ಎಂದರೆ ಸರಿ. ಮುಂದುವರೆದು ಹರೀಷ ಎಂದು ಬರೆದಿರುತ್ತಾರಲಾ ಎಂದು ನುಡಿಯುತ್ತಾರೆ. ನಿಪಿ-1 ಚೆಕ್ ನಲ್ಲಿ ಯಾರೂ ಸಹಿ ಹಾಕಿರುತ್ತಾರೆಂದು ನನಗೆ ಗೊತ್ತಿಲ್ಲ.

**ಈ ಹಂತದಲ್ಲಿ ಮುಂದುವರೆದ ಪಾಟೀಸವಾಲಿಗೆ ಕಾಲವಕಾಶವನ್ನು ಕೋರಿದ್ದರಿಂದ ನೀಡಲಾಯಿತು.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

ಅಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ
ನ್ಯಾಯಾಧೀಶರು, ಹುಣಸೂರು